(3)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ**

**ಪ್ರಶ್ನೆ:**

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಬಿ.ಡಿ.ಎ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ತದನಂತರ ಬಿ.ಡಿ.ಎ ಬಡಾವಣೆ ರಚನೆ ಮಾಡಿ, ನಿರ್ಮಾಣ ಮಾಡಿ, ನಿವೇಶನಗಳನ್ನು ಹಂಚಿಕೆ ಮಾಡಿ, ಹಂಚಿಕೆಯಾದ ಸುಮಾರು 40 ವರ್ಷಗಳ ನಂತರ ಸದರಿ ಸರ್ಕಾರಿ ಸ್ವತ್ತನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿ ಕಬಳಿಸಿಕೊಂಡಿರುತ್ತಾನೆ. ಇದರಲ್ಲಿ ಬಿ.ಡಿ.ಎ ಅಧಿಕಾರಿಗಳು ಶಾಮೀಲಾಗಿರುತ್ತಾರೆ. ಮುಂದುವರೆದು, ಸದರಿ ಖಾಸಗಿ ವ್ಯಕ್ತಿಯು ಆ ಸ್ವತ್ತನ್ನು ಬೇರೆಯವರಿಗೆ ಮರು ಮಾರಾಟ ಮಾಡಿರುವುದು ಹಾಗೂ ಜಾಯಿಂಟ್ ವೆಂಚರ್ ಮೂಲಕ ಒಡಂಬಡಿಕೆ ಮಾಡಿಕೊಂಡಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುತ್ತದೆ. ಅಲ್ಲದೇ, ಸದರಿ ಸ್ಥಳಕ್ಕೆ ಫಲಾನುಭವಿಗಳಿಗೆ ಭೇಟಿ ನೀಡಿದಾಗ ಬಿಡಿಎಯಿಂದ ಬದಲಿ ನಿವೇಶನವನ್ನು ಮಂಜೂರು ಮಾಡಿಸಿಕೊಂಡು ಬರುವಂತೆ ಗೂಂಡಾಗಿರಿ ಮಾಡುತ್ತಾ, ಸ್ಥಳೀಯ ಪೋಲೀಸ್ ಅಧಿಕಾರಿಗಳನ್ನು ಬಳಸಿಕೊಂಡು ಹೆದರಿಸುತ್ತಿರುತ್ತಾರೆ. ಈ ಸಂಬಂಧ ಪೋಲೀಸರು ಎಫ್.ಐ.ಆರ್.ದಾಖಲಿಸದೆ ಎನ್.ಸಿ.ಆರ್. ಮಾಡಿ, ಪರೋಕ್ಷವಾಗಿ ಖಾಸಗಿ ವ್ಯಕ್ತಿಗಳ ಪರವಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಪ್ರಕರಣಗಳಲ್ಲಿ ಭಾಗಿಯಾದ ಬಿಡಿಎ ಅಧಿಕಾರಿಗಳು ಹಾಗೂ ಖಾಸಗಿ ವ್ಯಕ್ತಿಯ ವಿರುದ್ಧ ಇದುವರೆವಿಗೂ ಯಾವುದೇ ಕಾನೂನು ಕ್ರಮ ಜರುಗಿಸದೆ ಇರುವುದರಿಂದ, ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:**

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಪ್ರಾಧಿಕಾರದ ಬಿ.ಟಿ.ಎಂ. 4ನೇ ಹಂತದ ಬಡಾವಣೆ ರಚನೆಗಾಗಿ ಪ್ರಾರಂಭಿಕ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಸಂಖ್ಯೆ:ಹೆಚ್‌ಯುಡಿ/334/ಎಂಎನ್‌ಎಕ್ಸ್/1990, ದಿನಾಂಕ:03.11.1990 ರಂದು ಹೊರಡಿಸಲಾಗಿದೆ. ಸದರಿ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಬಡಾವಣೆ ರಚನೆಗಾಗಿ ದಿನಾಂಕ:30.11.1996 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ. ಭೂಸ್ವಾಧೀನ ಕಾಯ್ದೆ 1894 ರ ಸೆಕ್ಷನ್ 16(2) ರಡಿ ಹೊರಡಿಸಿರುವ ಅಧಿಸೂಚನೆಯನ್ನು ದಿನಾಂಕ:08.02.2001ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯವಾಗಿರುತ್ತದೆ.

ಶ್ರೀಮತಿ ಶಾಂತಮ್ಮ ಮತ್ತು ಇತರರು ಸದರಿ ಜಮೀನಿನ ಭೂಸ್ವಾಧೀನದ ಕ್ರಮವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ:41386-395/2017ರಲ್ಲಿ ದಿನಾಂಕ:24.10.2019 ರಂದು ಅಂತಿಮ ಆದೇಶವಾಗಿರುತ್ತದೆ. ಅರ್ಜಿದಾರರು ದಿನಾಂಕ:14.01.2020 ರಂದು ಹಿಂಬರಹವನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಕಾನೂನು ವಿಭಾಗದ ಅಭಿಪ್ರಾಯದಂತೆ ಸದರಿ ಸರ್ವೆ ನಂಬರಿನ ವಾಸ್ತವಾಂಶ ಮಾಹಿತಿಯನ್ನು ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡಲಾಗಿದ್ದು, ಸದರಿ ಹಿಂಬರಹವು ನಿರಾಕ್ಷೇಪಣಾ ಪತ್ರವಾಗಿರುವುದಿಲ್ಲ. ಆದಾಗ್ಯೂ, ಸದರಿ ಹಿಂಬರಹವು ದುರುಪಯೋಗವಾಗುತ್ತಿರುವುದು ಚರ್ಚೆಯಲ್ಲಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಮತ್ತೊಮ್ಮೆ ಕಾನೂನಾತ್ಮಕವಾಗಿ ಪರಿಶೀಲಿಸಿ, ರಿಟ್ ಪಿಟಿಷನ್ ಸಂಖ್ಯೆ:41386-395/2017 ರ ಆದೇಶದ ವಿರುದ್ಧ ಮಾನ್ಯ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಂಖ್ಯೆ:398/2020-21 ಅನ್ನು ದಾಖಲಿಸಲಾಗಿದೆ.

ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ಒಳಗೊಂಡಂತೆ ಇನ್ನಿತರ ಸರ್ವೆ ನಂಬರ್‌ಗಳ ಜಮೀನಿನ ಆರ್.ಟಿ.ಸಿ ಕಾಲಂ 9 ಮತ್ತು 12(2)ರಲ್ಲಿ ಬಿಡಿಎ ಎಂದು ನಮೂದಿಸಲು ತಹಶೀಲ್ದಾರ್, ಬೆಂಗಳೂರು ದಕ್ಷಿಣ ಇವರನ್ನು ದಿನಾಂಕ:13.02.2023ರ ಪತ್ರದಲ್ಲಿ ಕೋರಲಾಗಿದೆ.

---

ನಅಇ 158 ಬೆಂಭೂಸ್ವಾ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ